**ಮಧ್ಯಂತರ ಅರ್ಜಿ 4 ಮತ್ತು 5 ರ ಮೇಲಿನ ಆದೇಶದಂತೆ ದಿನಾಂಕಃ 03.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು : ಪ್ರತಿವಾದಿಯ ಪರ ವಕೀಲರಿಂದಃ**

1. ನಾನು 2 ನೇ ತರಗತಿವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ್ದೇನೆ ನನಗೆ ಹಣಕಾಸಿನ ವ್ಯವಹಾರ ಮಾಡುವ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿ. ನಾನು ವ್ಯವಸಾಯ ಮಾಡುತ್ತೇನೆ. ನನಗೆ 8 ಎಕರೆ ಜಮೀನು ಇರುತ್ತದೆ. ಜಮೀನು ಇದೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರು ಮಾಡಿಲ್ಲ. ನನಗೆ 8 ಎಕರೆ ಜಮೀನು ಇರುವುದಿಲ್ಲವೆಂದರೆ ಸರಿಯಲ್ಲ. ವರ್ಷಕ್ಕೆ ನಾನು ರೂ. 12 ರಿಂದ 15 ಲಕ್ಷಗಳವರೆಗೆ ಆದಾಯ ಪಡೆಯುತ್ತೇನೆ. ನನಗೆ ಅಷ್ಟು ಆದಾಯ ಇರುವ ಬಗ್ಗೆ ನಾನು ಆದಾಯ ತೆರಿಗೆ ಇಲಾಖೆಗೆ ರಿಟರ್ನ್ಸ್ ಸಲ್ಲಿಸಿಲ್ಲ. ನನಗೆ ವರಲಹಳ್ಳಿ ಗ್ರಾಮೀಣ ಬ್ಯಾಂಕಿನಲ್ಲಿ ಮಾತ್ರ ಖಾತೆ ಇರುತ್ತದೆ . ಸದರಿ ಬ್ಯಾಂಕ್ ಖಾತೆಯಿಂದ ನಾನು ಹಣ ಪಡೆಯುವುದು ಮತ್ತು ಠೇವಣಿ ಇಡುವುದು ಮಾಡುತ್ತೇನೆ. ನಾನು ಬ್ಯಾಂಕಿನಿಂದ ಹಣ ಬಿಡಿಸಿಕೊಂಡು ಬಂದು ಅದನ್ನು ಸಾಲ ಕೊಡುವ ವ್ಯವಹಾರ ಮಾಡುತ್ತೇನೆ ಎಂದರೆ ಮನೆಯಲ್ಲಿ ಕೂಡಾ ಹಣ ಇಟ್ಟುಕೊಂಡು ಸಾಲ ಕೊಡುತ್ತೇನೆ. ನಾನು ಸಾಲ ಕೊಡುವ ವ್ಯವಹಾರ ಮಾಡಲು ಲೇವಾದೇವಿ ವ್ಯವಹಾರದ ಲೈಸೆನ್ಸ್ ಪಡೆದಿಲ್ಲ.

2. ನಾನು ಒಟ್ಟು ಎಷ್ಟು ಜನರಿಗೆ ಸಾಲ ಕೊಟ್ಟಿದ್ದೇನೆ? ಎಂದರೆ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಸಾಲ ಕೊಟ್ಟಿಲ್ಲ. ನನಗೆ ಬ್ಯಾಂಕ್ ಪಾಸ್ ಬುಕ್ ತಂದು ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ಸರಿ. ನಾನು ಬ್ಯಾಂಕ್ ಖಾತೆ ಹೊಂದಿಲ್ಲವಾದ್ದರಿಂದ ಬ್ಯಾಂಕಿನ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ವಿಜಯಕುಮಾರ ನನಗೆ ಪರಿಚಯವಿಲ್ಲ, ನನ್ನ ಗಂಡ ಗವಿಸಿದ್ಧಯ್ಯನವರಿಗೆ ಪರಿಚಯಸ್ಥ ಎಂದರೆ ಸರಿ. ಪ್ರತಿವಾದಿಯೇ ಆಂಧ್ರಾ ಬ್ಯಾಂಕಿನಲ್ಲಿ ನನಗೆ ಸಾಲ ಕೊಡಿಸಿದ್ದರು ಎಂದರೆ ಹೌದು, ಒಂದೇ ಬಾರಿ ಸಾಲ ಕೊಡಿಸಿದ್ದರು. ನಾನು ಆಂಧ್ರಾ ಬ್ಯಾಂಕಿನಲ್ಲಿ ರೂ. 2 ಲಕ್ಷ ಸಾಲ ಪಡೆದಿದ್ದೆ. ಈಗಲೂ ಆ ಸಾಲದ ಕಂತುಗಳನ್ನು ಕಟ್ಟುತ್ತಿದ್ದೇನೆ. ನಾನು ಪ್ರತಿವಾದಿಗೆ ಸಾಲವಾಗಿ ಕೊಟ್ಟ ರೂ. 6 ಲಕ್ಷ ಹಣವನ್ನು ಎಲ್ಲಿಂದ ತಂದಿದ್ದೆ? ಎಂದರೆ ರೂ. 2 ಲಕ್ಷ ಮನೆಯಲ್ಲಿತ್ತು, ರೂ. 2 ಲಕ್ಷ ಬ್ಯಾಂಕಿನಿಂದ ಬಿಡಿಸಿಕೊಂಡಿದ್ದೆ ಮತ್ತು ಇನ್ನೂ ರೂ. 2 ಲಕ್ಷವನ್ನು ಸೊಸೈಟಿಯಲ್ಲಿ ಸಾಲವಾಗಿ ಪಡೆದು ಕೊಟ್ಟಿದ್ದೆ. ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ನಾನು ಆ ರೀತಿ ಹೇಳಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. ನಾನು 500 ರೂ. ಗಳ 12 ಕಟ್ಟುಗಳಲ್ಲಿ ರೂ. 6 ಲಕ್ಷಗಳನ್ನು ಸಾಲವಾಗಿ ಕೊಟ್ಟಿದ್ದೆ. ಸೊಸೈಟಿಯಿಂದ ರೂ. 2 ಲಕ್ಷ ಸಾಲವಾಗಿ ಯಾವತ್ತು ತಂದಿದ್ದೀರಿ? ಎಂದರೆ ನನ್ನ ಗಂಡನಿಗೆ ಅದರ ಬಗ್ಗೆ ಗೊತ್ತಿರುತ್ತದೆ. ನಾನು ಸೊಸೈಟಿಯಲ್ಲಿ ಸಾಲ ಪಡೆದು ಪ್ರತಿವಾದಿಗೆ ಸಾಲ ಕೊಟ್ಟಿರುವ ಬಗ್ಗೆ ಎಲ್ಲಾ ದಾಖಲೆಗಳು ಮನೆಯಲ್ಲಿ ಇರುತ್ತವೆ. ಅವುಗಳನ್ನು ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ಸರಿ.

3. ದಿನಾಂಕ 21.05.2021 ರಂದು ಬೆಳಗ್ಗೆ 10 ರಿಂದ 11 ಗಂಟೆ ವೇಳೆಗೆ ಹಗರಿ ಆಂಜನೇಯ ದೇವಸ್ಥಾನದ ಹತ್ತಿರ ನಾನು ಪ್ರತಿವಾದಿಗೆ ರೂ. 6 ಲಕ್ಷ ಕೊಟ್ಟಿದ್ದೆ. ಆಂಜನೇಯ ದೇವಸ್ಥಾನದ ಒಳಗಡೆ ಕುಳಿತುಕೊಂಡು ಆ ಹಣವನ್ನು ಕೊಟ್ಟಿದ್ದೆ. ಬೆಳಗಿನ ಸಮಯದಲ್ಲಿ ಗುಡಿಗೆ ತುಂಬಾ ಜನ ಬರುತ್ತಾರೆ ಎಂದರೆ ಸುಮಾರು 10-12 ಜನ ಮಾತ್ರ ಇದ್ದರು. ದೇವಸ್ಥಾನದಲ್ಲಿ ಪೂಜಾರಿ ಕೂಡಾ ಇದ್ದರು ಎಂದರೆ ಸರಿ. ಸಾಲ ಕೊಡುವಾಗ ಮಲ್ಲಪ್ಪ, ಈರಣ್ಣ, ಶಾಂತಪ್ಪ, ನಾನು ಮತ್ತು ಪ್ರತಿವಾದಿ ಇದ್ದೆವು. ನನ್ನ ಗಂಡ ಇರಲಿಲ್ಲವೇ? ಎಂದರೆ ಇದ್ದರು. ಸದರಿ ದಿನಾಂಕದಂದು ನಾನು

ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿನಾಂಕ 19.05.2021 ರಂದು ಜಿಲ್ಲಾಧಿಕಾರಿಗಳು 5 ದಿನಗಳ ಕಾಲ ಲಾಕ್‌ಡೌನ್ ಪ್ರಕಟಿಸಿದ್ದರು ಎಂದರೆ ಇರಬಹುದು. ಆಗ ಕೋವಿಡ್ ನಿಯಮಾವಳಿ ಜಾರಿಯಲ್ಲಿದಿದ್ದರಿಂದ ಯಾರೂ ಹೊರಗಡೆ ಓಡಾಡುವುದು ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳದೇ ವ್ಯವಹಾರ ಮಾಡುವುದನ್ನು ಮಾಡುತ್ತಿರಲಿಲ್ಲ ಎಂದರೆ ನಾನು ಹಣ ಕೊಟ್ಟಿರುವುದು ನಿಜ. ಲಾಕ್‌ಡೌನ್ ಸಮಯದಲ್ಲಿ ರೂ. 5 ಸಾವಿರಕ್ಕಿಂತ ಹೆಚ್ಚಿನ ಮೊತ್ತವನ್ನು ಬ್ಯಾಂಕಿನಿಂದ ಬಿಡಿಸಿಕೊಳ್ಳಲು ಪ್ರಮಾಣ ಪತ್ರ ಸಲ್ಲಿಸಬೇಕಾಗಿತ್ತು ಎಂದರೆ ಹೌದು, ಆಗಾಗ ಹಣ ಬಿಡಿಸಿಕೊಂಡು ಬಂದು ಮನೆಯಲ್ಲಿ ಜಮಾ ಮಾಡಿ ಇಟ್ಟಿದ್ದೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಪ್ರಾಮಿಸರಿ ನೋಟ್ ನ್ನು ಬೆಳಗ್ಗೆ 10.30 ಗಂಟೆಗೆ ಮಲ್ಲಪ್ಪನೇ ಬರೆದಿದ್ದರು. ನಿಪಿ 1 ನ್ನು ತೋರಿಸಿ ಇದರಲ್ಲಿರುವ ಸಹಿಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ನಿಪಿ 1 ರಲ್ಲಿ ನನ್ನ ಸಹಿ ಬಿಟ್ಟರೆ ನನಗೆ ಬೇರೆಯವರ ಸಹಿಗಳು ಗೊತ್ತಾಗುವುದಿಲ್ಲ ಎಂದು ಹೇಳಿದ್ದಾರೆ. ನಿಪಿ 1 ನ್ನು ತೋರಿಸಿ ಇದರಲ್ಲಿ ನಿಮ್ಮ ಸಹಿ ತೋರಿಸಿ ಎಂದು ಕೇಳಿದ್ದು ಸಾಕ್ಷಿಯು ಇದರಲ್ಲಿ ನನ್ನ ಸಹಿ ಇಲ್ಲವೆಂದು ಹೇಳಿದ್ದಾರೆ. ಪ್ರತಿವಾದಿಯ ಮಕ್ಕಳು ಒಳ್ಳೆಯ ಆದಾಯ ಹೊಂದಿದ್ದಾರೆ ಎಂದರೆ ಸರಿ. ಪ್ರತಿವಾದಿಗೆ ಜಮೀನುಗಳು ಇರುತ್ತವೆ ಎಂದರೆ ಸರಿ. ಆದ್ದರಿಂದ ಪ್ರತಿವಾದಿಗೆ ಒಳ್ಳೆಯ ಆದಾಯ ಇರುವುದರಿಂದ ಆತ ನನ್ನ ಬಳಿ ಸಾಲ ಪಡೆಯುವ ಪ್ರಶ್ನೆ ಬರದೇ ಇದ್ದರೂ ದಾಖಲೆ ಸೃಷ್ಟಿಸಿ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ

**ಮಧ್ಯಂತರ ಅರ್ಜಿ 4 ಮತ್ತು 5 ರ ಮೇಲಿನ ಆದೇಶದಂತೆ ದಿನಾಂಕಃ 03.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು : ಪ್ರತಿವಾದಿಯ ಪರ ವಕೀಲರಿಂದಃ**

1. ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಪತ್ರ ಬರವಣಿಗೆ ವ್ಯವಹಾರಕ್ಕೆ ಲೈಸೆನ್ಸ್ ಪಡೆದಿಲ್ಲ. ಸಾಕ್ಷಿಗೆ 3 ಬಾರಿ ವಿವರಿಸಿ ನಿಪಿ 1 ಪ್ರಾಮಿಸರಿ ಪತ್ರದಲ್ಲಿ ನೀವು ಬರವಣಿಗೆ ಮಾಡಿರುವ ಮಾಹಿತಿಯನ್ನು ಯಾರ ಸೂಚನೆ ಮೇರೆಗೆ ಬರವಣಿಗೆ ಮಾಡಿದ್ದೀರಿ? ಎಂದು ಕೇಳಿದ ನಂತರವೂ ಸಾಕ್ಷಿಯು ವಕೀಲರು ಮಾಹಿತಿ ನೀಡಿದ ಮೇರೆಗೆ ಬರೆದಿದ್ದೇನೆ ಎಂದು ಹೇಳಿದ್ದಾರೆ. ಯಾವ ವಕೀಲರು ಮಾಹಿತಿ ನೀಡಿದರು? ಎಂದರೆ ಸುಜಾತಾ ವಕೀಲರು ಮಾಹಿತಿ ನೀಡಿದರು. ಅವರು ನೀಡಿದ ಮಾಹಿತಿಯ ಮೇರೆಗೆ ನಿಪಿ 1 ನ್ನು ನೀವು ತುಂಬಿದ್ದೀರಿ ಎಂದರೆ ಹೌದು. ನಿಪಿ 1 ರಲ್ಲಿ ವಕೀಲರು ಹೇಳಿದಂತೆ ಬರೆದಿದ್ದನ್ನು ಬಿಟ್ಟು ನನಗೆ ಬೇರೆ ಯಾವುದೇ ಮಾಹಿತಿ ಇರುವುದಿಲ್ಲ. ಈ ದಾವೆಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ವಾದಿಯ ಪರ ವಕೀಲರು ಮರುವಿಚಾರಣೆಗೆ ಅನುಮತಿ ಕೋರಿದ್ದು ನೀಡಲಾಗಿದೆ.**

1. ನಾನು ಯಾರ ಮಾಹಿತಿ ಪ್ರಕಾರ ನಿಪಿ 1 ನ್ನು ಬರವಣಿಗೆ ಮಾಡಿದ್ದೇನೆ? ಎಂದರೆ ವಕೀಲ ಮೇಡಮ್ ಹೇಳಿದ ಮಾಹಿತಿ ಮೇರೆಗೆ ಬರೆದಿದ್ದೇನೆ. ವಾದಿ ಪರ ವಕೀಲರು ವಾದಿ ಮತ್ತು ಪ್ರತಿವಾದಿ ಹೇಳಿದ ಮಾಹಿತಿ ಪ್ರಕಾರ ಬರೆದಿಲ್ಲವೇ? ಎಂದು ಕೇಳಿದ ನಂತರ ಸಾಕ್ಷಿಯು ಅವರೂ ಕೂಡಾ ಮಾಹಿತಿ ನೀಡಿದ್ದರು ಎಂದು ಹೇಳಿದ್ದಾರೆ.ತ

**ಮುಂದುವರೆದ ಪಾಟೀಸವಾಲು : ಪ್ರತಿವಾದಿಯ ಪರ ವಕೀಲರಿಂದಃ**

2. ವಾದಿಯ ಪರ ವಕೀಲರು ಈಗ ನೀಡಿದ ಮಾಹಿತಿಯಂತೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಇಲ್ಲ, ದಿನಾಂಕ 20.05.2021 ರಂದು ವಾದಿ ಕೊಟ್ರಮ್ಮ, ಪ್ರತಿವಾದಿ ವಿಜಯಕುಮಾರ ಮತ್ತು ವಕೀಲರಾದ ಸುಜಾತಾ ಮೇಡಮ್ ಕೊಟ್ಟ ಮಾಹಿತಿ ಪ್ರಕಾರ ನನ್ನ ಕೈಬರವಣಿಗೆ ಚೆನ್ನಾಗಿದೆ ಎಂದು ನಿಪಿ 1 ನ್ನು ಬರೆದಿದ್ದೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ